**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ನ್ಯಾಯಾಲಯ, ಹುಣಸೂರು**

**C.C. 182/2021**

| | | |
|---|---|---|
| ಸಾಕ್ಷಿಯ ಹೆಸರು | ಃ ಚಂದ್ರು | ಡಿ. ಡಬ್ಲ್ಯೂ 1 |
| ತಂದೆ/ಗಂಡನ ಹೆಸರು | ಃ ತಮ್ಮೆಗೌಡ | |
| ವಯಸ್ಸು | ಃ 62 ವರ್ಷ | |
| ವೃತ್ತಿ | ಃ ವ್ಯವಸಾಯ | |
| ವಾಸಸ್ಥಳ | ಃ ಹಬ್ಬನಕುಪ್ಪೆ | |

**ಸಾಕ್ಷಿಗೆ ದಿನಾಂಕ 16.06.2026 ರಂದು ಪ್ರಮಾಣ ವಚನ ನೀಡಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿದ**

ನನ್ನ ತಂದೆಯ ಹೆಸರು ತಮ್ಮೆಗೌಡ ಆದರೆ ಪಿರ್ಯಾದುದಾರರು ದೊಡ್ಡ ತಮ್ಮೆಗೌಡ ಎಂದು ಸುಳ್ಳು ಪ್ರಕರಣ ದಾಖಲು ಮಾಡಿರುತ್ತಾರೆ.

ಪಿರ್ಯಾದುದಾರರ ಯಜಮಾನ ಪ್ರೇಮಕುಮಾರ ನಮ್ಮ ಊರಿನವರು. ಪಿರ್ಯಾದುದಾರರ ನಮ್ಮ ಊರಿನವರಾಗಿದ್ದ ರಿಂದ ಪರಿಯಸ್ಥರು. ನನ ಹಾಗೂ ಪಿರ್ಯಾದುದಾರರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ. ನಾನು ಪಿರ್ಯಾದುದಾರರಿಂದ ಯಾವುದೇ ಕೈ ಸಾಲ ಪಡೆದುಕೊಂಡಿಲ್ಲ. ಪಿರ್ಯಾದುದಾರರ ಯಜಮಾನ ಪ್ರೆಮಕುಮಾರ ರವರು ಚಿಲಕುಂದಾದ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಲ್ಲಿ ಕಾರ್ಯದರ್ಶಿ ಯಾಗಿ ಕೆಲಸ ಮಾಡುತ್ತಿದ್ದರು. ನಾನು ಸದರಿ ಬ್ಯಾಂಕ್ ನಲ್ಲಿ 3 ಬಾರಿ ನಿರ್ದೇಶಕ ಹಾಗೂ 1 ಬಾರಿ ಅದ್ಯಕ್ಷನಾಗಿದ್ದೇನು. ಆ ಸಮಯದಲ್ಲಿ ಪ್ರೆಮಕುಮಾರ ರವರಿಂದ ಬ್ಯಾಂಕ್ ನ ವ್ಯವಹಾರಕ್ಕೆ ಸಂಬಂಧಿಸಿದಂತಂತೆ ಲೊಾದೋಷ ಕಂಡುಬಂದಿದ್ದು ಆಗ ಲೆಕ್ಕ ಪರಿಶೋದಕರನ್ನು ನೇಮಕ ಮಾಡಿದ್ದೇನು, ಅಗ 17 ಲಕ್ಷ ಹಣ ದೂರುಪಯೆಗವಾದ ಬಗ್ಗೆ ಕಂಡು ಬಂದಿರುತ್ತದೆ. ತಕ್ಷಣವೇ ನಾವು ಅಸಿಸ್ಟೆಂಟ್ ರಿಜಿಸ್ಟರ್

ನ್ಯಾಯಾಲಯದಲ್ಲಿ ಪಿರ್ಯಾದುದಾರರ ಗಂಡ ಪ್ರೆಮ ಕುಮಾರ ರವರ ವಿರುದ್ಧ ಪ್ರಕರ ದಾಖಲು ಮಾಡಿದ್ದೇವು.

ನಾವು ನಿಪಿ-1 ಚೆಕ್ಕಗೆ ಸಹಿ ಮಾಡಿ ಬ್ಯಾಂಕ್ ನ ಕಪಾಟಿನಲ್ಲಿ ಇಟ್ಟಿದ್ದೇನು. ಆಗ ಪ್ರೆಮ ಕಮಾರ ರವರು ಚೆಕ್ ನ್ನು ಕಳ್ಳತನ ಮಾಡಿ ಪಿರ್ಯಾದುದಾರರಿಗೆ ಕೋಟ್ಟು ನ್ನ್ನ ವಿರುದ ಪ್ರಸ್ತುತ ಸುಳ್ಳು ಪ್ರಕರಣ ದಾಖಲು ಮಾಡಿರುತ್ತಾರೆ. ನನಗೆ ನ್ಯಾಯಾಲಯದಿಂದ ಸಮಸ್ನ ಬಂದಾಗ ನಾನು ಚೆಕ್ಕ ನ್ನು ಹುಡುಕಿದಾಗ ಚೆಕ್ಕು ಕಳೆದು ಹೋಗಿರುವ ವಿಚಾರ ಗೊತ್ತಾಗಿರುತ್ತದೆ. ನಂತರ ನಾನು ಸಂಬಂಧಪಟ್ಟ ಠಾಣೆಗೆ ದೂರು ನೀಡಲು ಹೋದಾಗ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಗೆ ಬಾಕಿ ಇರುವುದರಿಂದ ನನ್ನ ದೂರನ್ನು ಸ್ವಿಕರಿಸಲಿಲ್ಲ. ಪಿರ್ಯಾದುದಾರರು ನನಗೆ ಮುಂಚಿತಾಗಿ ಯಾವುದೇ ನೋಟಿಸು ಕಳುಹಿಸಿಲ್ಲ. ಚೆಕ್ಕನಲ್ಲಿ ಬರೆದ ಒಕ್ಕಣೆ ಬರಹ ನಾನು ಬರೆದಿಲ್ಲ. ಚೆಕ್ಕಿನಲ್ಲಿರುವ ಬರೆವಣೆಗೆಗೂ ಸಹಿ ಮಾಡಿದ ಇಂಕಿಗೂ ವ್ಯತ್ಯಾಸ ಇರುತ್ತದೆ. ಚೆಕ್ಕನ್ನು ತಿದ್ದುಪಡಿ ಮಾಡಿರುತ್ತಾರೆ. ಪಿರ್ಯಾದುದಾರರಿಂದ 4 ಲಕ್ಷ 75 ಸಾವಿರ ಸಾಲ ನೀಡುವ ಆರ್ಥಿಕ ಚೈತನ್ಯ ಇರುವುದಿಲ್ಲ. ನನಗೆ ಪಿತ್ರಾರ್ಜಿತಿತವಾಗಿ ವಾಸದ ಮನೆ ಮತ್ತು 7 ಎಕರೆ ಅಡಿಗೆ ತೋಟ ಹಾಗೂ ತೆಂಗಿನ ತೋಟ ಇರುತ್ತದೆ. ನಾನು ಆರ್ಥಿಕವಾಗಿ ಸದೃಡನಾಗಿದ್ದು ಪಿರ್ಯಾದುದಾರರಿಂದ ಸಾಲ ಪಡೆಯುವ ಯಾವುದೇ ಅವಶ್ಯಕತೆ ಇರುವುದಿಲ್ಲ.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೇಳಿದ್ದು, ನೀಡಲಾಯಿತು.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಸಾ.ಓ.ಹೇ.ಸ.ಒ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ**
**ಹುಣಸೂರು.**